# ಹಕ್ಕುಚ್ಯುತಿ ಪ್ರಸ್ತಾಪ ಕೊನೆಗೂ ಸುಖಾಂತ್ಯ

13/3/20

## ಮಾಜಿ ಸ್ಪೀಕರ್ ವಿರುದ್ಧ ಮುಗಿಬಿದ್ದ ಬಿಜೆಪಿ ಸದಸ್ಯರು ■ ಅನರ್ಹತೆ ಶಿಕ್ಷೆ ನೀಡಿದ್ದಕ್ಕೆ ಸೇಡು ತೀರಿಸಿಕೊಂಡರು

**ವಿಧಾನಸಭೆ:** ಬುಧವಾರ ಇಡೀ ದಿನದ ಕಲಾಪ ಬಲಿ ಪಡೆದಿದ್ದ ಸಚಿವ ಡಾ.ಕೆ.ಸುಧಾಕರ್ ಹಾಗೂ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ನಡುವಿನ ಪರಸ್ಪರ ಹಕ್ಕುಚ್ಯುತಿ ಪ್ರಸ್ತಾಪ ಗುರುವಾರ ಸುಖಾಂತ್ಯಗೊಂಡಿತು.

ಡಾ.ಕೆ.ಸುಧಾಕರ್ ಹಾಗೂ ಕೆ.ಆರ್.ರಮೇಶ್ ಕುಮಾರ್ ಇಬ್ಬರೂ ವಿಷಾದ ವ್ಯಕ್ತಪಡಿಸುವುದರೊಂದಿಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪ್ರಸ್ತಾಪ ಕೈ ಬಿಟ್ಟಿರುವುದಾಗಿ ರೂಲಿಂಗ್ ನೀಡಿದರು.

ಗುರುವಾರ ಬೆಳಗ್ಗೆ ಸಿದ್ದರಾಮಯ್ಯ ಅವರು ಸದನದಲ್ಲಿ ಡಾ.ಕೆ.ಸುಧಾಕರ್ ವಿರುದ್ಧದ ಹಕ್ಕುಚ್ಯುತಿ ವಿಷಯ ಪ್ರಸ್ತಾಪಿಸಿದರು. ಭೋಜನಾ ವಿರಾಮದ ನಂತರ ಡಾ.ಕೆ.ಸುಧಾಕರ್ ಸ್ಪಷ್ಟನೆ ನೀಡುವುದರ ಜತೆಗೆ ತಮ್ಮನ್ನು ಅನರ್ಹಗೊಳಿಸಿದ್ದು ಸುಪ್ರೀಂಕೋರ್ಟ್ ಸ್ಪೀಕರ್ ಕ್ರಮದ ಬಗ್ಗೆ ಕೆಲವು ಅಂಶ ಉಲ್ಲೇಖಿಸಿದ್ದು ಸೇರಿ ತಾವು ಹೇಳಬೇಕಾದ್ದನ್ನು ಹೇಳಿ ರಮೇಶ್‌ಕುಮಾರ್ ವಿರುದ್ಧ ಮುಗಿಬಿದ್ದರು.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಇಲ್ಲಿ ಸುಪ್ರೀಂಕೋರ್ಟ್‌ನ ತೀರ್ಪಿನ ಬಗ್ಗೆ ವ್ಯಾಖ್ಯಾನ ನಡೆಯುತ್ತಿದೆಯಾ? ಇದಕ್ಕೆ ಅವಕಾಶ ಕೊಟ್ಟಿದ್ದೀರಾ? ಪ್ರಕರಣದಲ್ಲಿ ನ್ಯಾಯಾಲಯವು ರಮೇಶ್ ಕುಮಾರ್ ಅವರ ತೀರ್ಪನ್ನು ಎತ್ತಿ ಹಿಡಿದಿದೆ. ಹೀಗಿರುವಾಗ ಬೇರೆ ವಿಚಾರ ಯಾಕೆ ಎಂದು ಪ್ರಶ್ನಿಸಿದರು.

ಇದಕ್ಕೆ ಸಚಿವರಾದ ವಿ.ಸೋಮಣ್ಣ, ಬಸವರಾಜ ಬೊಮ್ಮಾಯಿ; ನೀವು ಎರಡೂವರೆ ಗಂಟೆ ಮಾತನಾಡಿದಾಗ ನಾವು ಸುಮ್ಮನಿದ್ದೆವು. ಇದೀಗ ಹಕ್ಕುಚ್ಯುತಿ ಬಗ್ಗೆ ಅವರು ಸ್ಪಷ್ಟನೆ ನೀಡಬೇಕಾದರೆ ಇವೆಲ್ಲಾ ದಾಖಲೆ ಹೇಳಬೇಕಲ್ಲವೇ? ಸತ್ಯ ಯಾವತ್ತೂ ಕಹಿಯಾಗಿರುತ್ತದೆ ಎಂದು ಛೇಡಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರಾದ ಡಾ.ಜಿ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ ಸಹಿತ ಹಲವರು ವಿರೋಧ ವ್ಯಕ್ತಪಡಿಸಿದರು.

ಇದಕ್ಕೆ ಡಾ.ಕೆ.ಸುಧಾಕರ್ ಪ್ರತಿಕ್ರಿಯಿಸಿ, 'ನಾನು ಸುಪ್ರೀಂಕೋರ್ಟ್ ಹೇಳಿರುವುದನ್ನು ಬಿಟ್ಟು ಬೇರೆ ಯಾವುದೇ ವಿಚಾರ ಹೇಳುತ್ತಿಲ್ಲ ಎಂದು ಮತ್ತೆ ರಮೇಶ್‌ಕುಮಾರ್ ವಿರುದ್ಧವೇ ವಾಗ್ದಾಳಿ ಮುಂದುವರಿಸಿದರು.

**ರಮೇಶ್‌ಕುಮಾರ್ ಆಕ್ರೋಶ:** ಇದಕ್ಕೆ ರಮೇಶ್ ಕುಮಾರ್ ಅವರು ಆಕ್ರೋಶಗೊಂಡು, ಸ್ಪೀಕರ್ ಅವರಿಗೆ, 'ನೀವು ಇದಕ್ಕೆ ಅವಕಾಶ ಕೊಡುತ್ತೀರಾ? ನಾನು ಹೇಳಿದ ಮಾತುಗಳಿಗೆ ಈಗಲೂ ಬದ್ಧನಿದ್ದೇನೆ. ಸ್ಪೀಕರ್ ಆದ ಮಾತ್ರಕ್ಕೆ ನನ್ನ ಹಕ್ಕುಗಳು ಮೊಟಕಾಗುವುದಿಲ್ಲ ಸ್ಪೀಕರ್ ಆಗುವುದಕ್ಕೂ ಮೊದಲು ನಾನು ಈ ಮನೆಯ ಒಬ್ಬ ಸದಸ್ಯನೇ. ನನ್ನ ಭಾವನೆಯನ್ನು ವ್ಯಕ್ತಪಡಿಸಲು ನನಗೆ ಎಲ್ಲ ರೀತಿಯ ಹಕ್ಕು ಇರುತ್ತದೆ' ಎಂದು ತಮ್ಮ ಮಾತುಗಳನ್ನು ಸಮರ್ಥಿಸಿಕೊಂಡರು.

**ವಿಷಾದ ವ್ಯಕ್ತಪಡಿಸಿದ ಸಚಿವ ಸುಧಾಕರ್:** ಮಾತು ಮುಂದುವರಿಸಿದ ಸುಧಾಕರ್, 'ನಾನು ಸ್ಪೀಕರ್ ಪೀಠಕ್ಕೆ ಅಗೌರವ ತೋರಿಲ್ಲ ತೋರುವುದೂ ಇಲ್ಲ ಆ ಪೀಠದಲ್ಲಿ ಹಿಂದೆ ಕುಳಿತವರು ಕೈಗೊಂಡಿದ್ದ ಕ್ರಮದ ಬಗ್ಗೆ ಮಾತ್ರ ಪ್ರಸ್ತಾಪಿಸಿದ್ದೆ. ಒಂದೊಮ್ಮೆ ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಹೇಳಿದರು.

**ವಿಷಾದ ವ್ಯಕ್ತಪಡಿಸುವೆ ಎಂದ ರಮೇಶ್ ಕುಮಾರ್:** ರಮೇಶ್ ಕುಮಾರ್ ಮಾತನಾಡಿ, 'ನಾನು ಯಾವುದೇ ಅವಹೇಳನಕಾರಿ ಮಾತು ಆಡಿಲ್ಲ ಎಂದೂ ಆಡುವುದಿಲ್ಲ ನಾನು ಈ ಮಾತನ್ನು ಪ್ರಜ್ಞಾಪೂರ್ವಕವಾಗಿಯೇ ಹೇಳುತ್ತಿದ್ದೇನೆ. ಇಷ್ಟಾದರೂ ಆ ರೀತಿ ಮಾತನಾಡಿದ್ದೇನೆ ಎಂದು ಸುಧಾಕರ್ ಅವರಿಗೆ ಅನ್ನಿಸಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ. ಆ ವಿಚಾರದಲ್ಲಿ ನನಗೇನು ಪ್ರತಿಷ್ಠೆಯೂ ಇಲ್ಲ. ನನ್ನ ಸ್ಥಾನಮಾನ ಕಡಿಮೆಯಾಗುವುದೂ ಇಲ್ಲ' ಎಂದು ತಿಳಿಸಿದರು.

**ವಿಷಯ ಕೈಬಿಡಿ ಎಂದ ಮಾಧುಸ್ವಾಮಿ:** ಎರಡೂ ಕಡೆಯ ಪ್ರಸ್ತಾಪ ಮುಗಿದ ನಂತರ ಹಕ್ಕುಚ್ಯುತಿ ಬಗ್ಗೆ ತೀರ್ಪು ಕಾಯ್ದಿರಿಸುವುದಾಗಿ ಸ್ಪೀಕರ್ ಅವರು ಮೊದಲಿಗೆ ತಿಳಿಸಿದರಾದರೂ, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ನಾನು ನಮ್ಮ ಪ್ರಸ್ತಾಪ ಮಾಡಿದ್ದೇವೆ, ಉಳಿದದ್ದು ಸ್ಪೀಕರ್‌ಗೆ ಬಿಟ್ಟದ್ದು ಎಂದು ಹೇಳಿದರು. ಸರ್ಕಾರದ ಪರವಾಗಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ಎರಡೂ ಕಡೆಯಿಂದ ವಿಷಾದ ವ್ಯಕ್ತವಾಗಿರುವುದರಿಂದ ಇಷ್ಟಕ್ಕೇ ಈ ವಿಷಯ ಕೈ ಬಿಡಿ ಎಂದು ಸ್ಪೀಕರ್‌ಗೆ ಮನವಿ ಮಾಡಿದರು. ಹೀಗಾಗಿ, ಅಂತಿಮವಾಗಿ ಪ್ರಸ್ತಾಪ ಕೈಬಿಡಲಾಯಿತು.

ಇದರ ನಡುವೆ, ಬೋಪಯ್ಯ ಸೇರಿದಂತೆ ಹಲವು ಬಿಜೆಪಿ ಸದಸ್ಯರು ನಿಯಮ 363ರಡಿ ಅವಹೇಳನಕಾರಿ ಹೇಳಿಕೆ ನೀಡಿರುವುದರಿಂದ ರಮೇಶ್ ಕುಮಾರ್ ವಿರುದ್ಧ ಕ್ರಮ ಕೈಗೊಳ್ಳಲು ಕೋರಿ ನೀಡಲಾಗಿದ್ದ ಮತ್ತೊಂದು ನೋಟಿಸ್ ಚರ್ಚೆಗೆ ಬರಲಿಲ್ಲ. ಅದರ ಬಗ್ಗೆಯೂ ಚರ್ಚೆ ಬೇಡ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

### ಸುಧಾಕರ್ ಬೆನ್ನಿಗೆ ನಿಂತ ಸಚಿವರು

ಡಾ.ಕೆ.ಸುಧಾಕರ್ ಅವರು ರಮೇಶ್‌ಕುಮಾರ್ ವಿರುದ್ಧ ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಮುಂದಿಟ್ಟು ವಾಗ್ದಾಳಿ ನಡೆಸುವಾಗ ಸಚಿವರಾದ ಬಿ.ಸಿ.ಪಾಟೀಲ್, ಬೈರತಿ ಬಸವರಾಜ್, ಗೋಪಾಲಯ್ಯ, ಎಸ್.ಟಿ. ಸೋಮಶೇಖರ್, ನಾರಾಯಣಗೌಡ, ರಮೇಶ್ ಜಾರಕಿಹೊಳಿ, ಶಿವರಾಂ ಹೆಬ್ಬಾರ್ ಬೆನ್ನಿಗೆ ನಿಂತರು. ಕಾಂಗ್ರೆಸ್‌ನವರು ಎದ್ದು ನಿಂತಾಗಲೆಲ್ಲಾ, ನಾವು, ನೋವು ಅನುಭವಿಸಿದ್ದೇವೆ ಎಂದು ಸುಮ್ಮನಾಗಿರಿಸುತ್ತಿದ್ದರು. ಒಂದು ರೀತಿಯಲ್ಲಿ ತಮ್ಮನ್ನು ಅನರ್ಹತೆಗೊಳಿಸಿದ್ದಕ್ಕೆ ಮಾತಿನ ಮೂಲಕ ಸೇಡು ತೀರಿಸಿಕೊಳ್ಳುವಂತೆ ಒಳಗೊಳಗೆ ಖುಷಿ ಪಡುತ್ತಿದ್ದರು.

### ರಮೇಶ್ ಕುಮಾರ್ ಬೆನ್ನಿಗೆ ನಿಂತವರು

ಕಾಂಗ್ರೆಸ್ ಕಡೆಯಿಂದ ರಮೇಶ್‌ಕುಮಾರ್ ಪರವಾಗಿ ಸಿದ್ದರಾಮಯ್ಯ, ದೇಶಪಾಂಡೆ ಬಿಟ್ಟರೆ ಬೇರೆ ಯಾರೂ ಅಷ್ಟು ಪ್ರಬಲವಾಗಿ ನಿಲ್ಲಲಿಲ್ಲ ಅಂತಿಮವಾಗಿ ರಮೇಶ್‌ಕುಮಾರ್ ಅದನ್ನು ತೋಡಿಕೊಂಡರು. ಸಮ್ಮಿಶ್ರ ಸರ್ಕಾರದಲ್ಲಿ ನಾನು ಸ್ಪೀಕರ್ ಆಗಿದ್ದೆ ಜೆಡಿಎಸ್‌ನವರು ನನ್ನ ಪರವಾಗಿ ಮಾತನಾಡಬಹುದು ಎಂದು ಕೊಂಡಿದ್ದೆ. ಆದರೆ, ಅವರು ನಮಗ್ಯಾಕೆ ಎಂದಿದ್ದಾರೆ. ಸಿದ್ದರಾಮಯ್ಯ ಅವರು ನನಗೆ ಕ್ಲೋಸ್ ಆದ್ದರಿಂದ ಅವರು ಮಾತನಾಡು ತ್ತಿದ್ದಾರೆ. ಆಗಿನ ತೀರ್ಪಿನಿಂದ ಲಾಭ ಪಡೆದ ವರು ಸುಮ್ಮನಿದ್ದಾರೆ ಎಂದು ಮುಖ್ಯಮಂತ್ರಿಯವರತ್ತ ನೋಡಿ ಹೇಳಿದರು.

### ವ್ಯಾಪಾರ ಬಲ್ಲವನಿಗೆ ನಷ್ಟವಿಲ್ಲ

ಸಚಿವ ಶಿವರಾಮ್ ಹೆಬ್ಬಾರ್, 'ಮಾತು ಬಲ್ಲವನಿಗೆ



ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ' ಎಂಬಂತೆ ರಮೇಶ್ ಕುಮಾರ್ ಅವರು ತಮ್ಮ ಮಾತುಗಳ ಮೂಲಕವೇ ತಾವು ಮಾಡಿದ್ದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಇದಕ್ಕೆ ತಿರುಗೇಟು ನೀಡಿದ ರಮೇಶ್‌ಕುಮಾರ್, 'ವ್ಯಾಪಾರ ಬಲ್ಲವನಿಗೆ ನಷ್ಟವಿಲ್ಲ' ಎಂದು ಸುಮ್ಮನಾಗಿಸಿದರು.

### ನಮಗೂ ವಿಚಾರ ಗೊತ್ತಿದೆ

ಚರ್ಚೆ ಸಂದರ್ಭದಲ್ಲಿ ಸಮ್ಮಿಶ್ರ ಸರ್ಕಾರ ಪತನ ಸಮಯದಲ್ಲಿ ಯಡಿಯೂರಪ್ಪ, ಮಾಧುಸ್ವಾಮಿ ನನ್ನ ಕೊಠಡಿಗೆ ಬಂದಿದ್ದರು ಎಂದು ರಮೇಶ್ ಕುಮಾರ್ ಹೇಳಿದಾಗ, ಸಚಿವ ರಮೇಶ್ ಜಾರಕಿಹೊಳಿ, ನಿಮಗೆ ಗೊತ್ತಿರುವಂತೆ ನಮಗೂ ಬಹಳ ವಿಚಾರ ಗೊತ್ತಿದೆ. ಇಲ್ಲಿ ಹೇಳಿದರೆ ಎಲ್ಲರೂ ಎಕ್ಸ್‌ಪೋಸ್ ಆಗ್ತೀರಿ ಎಂದರು. ಆಗ ಕಾಂಗ್ರೆಸ್‌ನ ಡಾ.ಜಿ.ಪರಮೇಶ್ವರ್ ಎದ್ದು ನಿಂತು, ನಾನು ಬೆಳಗ್ಗೆಯಿಂದ ನೋಡುತ್ತಿದ್ದೇನೆ, ಬಹಳ ವಿಚಾರ ಇದೆ ಎಂದು ಹೇಳುತ್ತಲೇ ಇದ್ದೀರಿ, ಹೇಳಿ ಬಿಡಿ ಏನೆಂದು ನನಗೆ ಗೊತ್ತಾಗಬೇಕು ಎಂದರು. ಆಗ, ರಮೇಶ್ ಜಾರಕಿಹೊಳಿ, ನೀವು ಅದನ್ನು ಹೇಳಿಸಬೇಕು ಅಂತಲೇ ಕೆಣಕುತ್ತಿದ್ದೀರಿ ಎಂದು ಟಾಂಗ್ ನೀಡಿದರು.